**<u>ಅಸಲು ದಾವಾ ಸಂಖ್ಯೆ-181/2023</u>** **ಡಿ.ಡಬ್ಲ್ಯೂ:- 1**

ದಿನಾಂಕಃ **10.10.2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ವಾದಿ ಪರ ವಕೀಲರಿಂದ:-</u>

ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳುವ ಪೂರ್ವದಲ್ಲಿ ಸರ್ವೇ ನಂ.1/2 ರಲ್ಲಿ 4 ಎಕರೆ 37 ಗುಂಟೆ ಜಮೀನು ಇದ್ದು ಅದರಲ್ಲಿ 1 ಎಕರೆ 36 ಗುಂಟೆ ಜಮೀನು ನನ್ನ ತಾಯಿಯ ಹೆಸರಿನಲ್ಲಿ ಮತ್ತು ಉಳಿದ 3 ಎಕರೆ 1 ಗುಂಟೆ ಜಮೀನು 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. ನಮ್ಮ ಜಮೀನಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ನಿಪಿ-4 ಪಕ್ಕಾಪುಸ್ತಕದಲ್ಲಿ ನಮ್ಮ ತಾಯಿಯ ಹೆಸರಿಗೆ 1 ಎಕರೆ 36 ಗುಂಟೆ ಜಮೀನು ಮತ್ತು 1 ನೇ ಪ್ರತಿವಾದಿಯ ಹೆಸರಿಗೆ 3 ಎಕರೆ 1 ಗುಂಟೆ ಜಮೀನು ನಮೂದಾಗಿದೆ ಎಂದರೆ ಸರಿ. ನಿಪಿ-4 ಪಕ್ಕಾಪುಸ್ತಕದಲ್ಲಿ ಸರ್ವೇ ನಂ.1 ಮತ್ತು 1/ 2 ಎಂದು ವಿಭಾಗ ಮಾಡಿದ್ದಾರೆ ಎಂದರೆ ಸರಿ. ನಿಪಿ-4 ಪಕ್ಕಾಪುಸ್ತಕದಲ್ಲಿ I ಆಸ್ತಿಯು ನನ್ನ ತಾಯಿಗೆ ಸೇರಿದ್ದು ಮತ್ತು II ಆಸ್ತಿಯು 1 ನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿ. ನಿಪಿ-5 ರಲ್ಲಿ ನನ್ನ ತಾಯಿ ಮತ್ತು 1 ನೇ ಪ್ರತಿವಾದಿಯ ಹೆಸರಿಗೆ 4 ಎಕರೆ 37 ಗುಂಟೆ ಮತ್ತು ವಾದಿಯ ಹೆಸರಿಗೆ 4 ಎಕರೆ 36 ಗುಂಟೆ ಜಮೀನು ಎಂದು ನಮೂದಾಗಿದೆ ಎಂದರೆ ಸರಿ.

1 ನೇ ಪ್ರತಿವಾದಿಗೆ ಸೇರಿದ ಆಸ್ತಿಯ ಸರ್ವೇ ನಂಬರ್ ಈಗ 1/ 4 ಆಗಿದೆ ಎಂದರೆ ಸರಿ. ನಮ್ಮ ಆಸ್ತಿ ಸರ್ವೇ ನಂ.1/2 ಆಗಿರುತ್ತದೆ ಎಂದರೆ ಸರಿ. ಸರ್ವೇ ನಂ.1/2 ಮತ್ತು 1/ 4 ರ ಆಸ್ತಿಯ ಉತ್ತರ ದಿಕ್ಕಿಗೆ ದಾವಾ ಆಸ್ತಿ ಇದೆ ಎಂದರೆ ಸರಿ. ನಾನು ಮತ್ತು ನನ್ನ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡ ನಂತರ ಸರ್ವೇ ನಂ.1/2 ರ ಆಸ್ತಿಯು ಪೋಡಿ ಆಗಿ ಸರ್ವೇ ನಂ.1/5 ರಲ್ಲಿ 3 ನೇ ಪ್ರತಿವಾದಿಯ ಹೆಸರಿಗೆ 1 ½ ಗುಂಟೆ ಜಮೀನು, ಸರ್ವೇ ನಂ.1/8 ರಲ್ಲಿ 3 ನೇ ಪ್ರತಿವಾದಿಯ ಹೆಸರಿಗೆ 1 ½ ಗುಂಟೆ ಜಮೀನು ಆಗಿರುತ್ತದೆ

ಎಂದರೆ ಸರಿ. 6 ನೇ ಪ್ರತಿವಾದಿಯ ಹೆಸರಿಗೆ ಸರ್ವೇ ನಂ.1/6 ರಲ್ಲಿ 6 ½ ಗುಂಟೆ, ಸರ್ವೇ ನಂ.1/11 ರಲ್ಲಿ 17 ¼ ಗುಂಟೆ ಸಹ 6 ನೇ ಪ್ರತಿವಾದಿಯ ಹೆಸರಿಗೆ ಪ್ರತ್ಯೇಕವಾಗಿ ನಮೂದಾಗಿರುತ್ತದೆ ಎಂದರೆ ಸರಿ. ಸರ್ವೇ ನಂ.1/2 ರಲ್ಲಿ 3 ¼ ಗುಂಟೆ ಜಮೀನು 7 ನೇ ಪ್ರತಿವಾದಿಯ ಹೆಸರಿಗೆ ನಮೂದಾಗಿರುತ್ತದೆ ಎಂದರೆ ಸರಿ. ನಾನು ಮತ್ತು ಪ್ರತಿವಾದಿ 3 ರಿಂದ 7 ರವರು ವಿಭಾಗ ಮಾಡಿಕೊಂಡ ನಂತರ ಕುಟುಂಬದ ಆಸ್ತಿಯನ್ನು ಮನೆ ಮತ್ತು ಕಣವಾಗಿ ಉಪಯೋಗಿಸಿಕೊಳ್ಳುತ್ತಿದ್ದೇವೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳು ಸರ್ವೇ ನಂ.1/4 ರಲ್ಲಿ ಅಡಿಕೆ ತೋಟವನ್ನು ಹಾಕಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ವಾದಿಯು ಸರ್ವೇ ನಂ.1/3 ರಲ್ಲಿ 4 ಎಕರೆ 36 ಗುಂಟೆ ಜಮೀನಿನಲ್ಲಿ ಅಡಿಕೆ ತೋಟವನ್ನು ಹಾಕಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ವಾದಿಗೆ ಸೇರಿದ ಸರ್ವೇ ನಂ.1/3 ರಲ್ಲಿರುವ 4 ಎಕರೆ 36 ಗುಂಟೆ ಜಮೀನನ್ನು ಉಳುಮೆ ಮಾಡಿಕೊಂಡು ಹೋಗಲು ನಮ್ಮಿಂದ ಯಾವುದೇ ತಕರಾರು ಇರುವುದಿಲ್ಲ. ನಿಪಿ-7 ರ ನಕಾಶೆಯಲ್ಲಿ ತೋರಿಸಿರುವಂತೆ 6 ಗುಂಟೆ ಜಮೀನನ್ನು ನಾವು ಒತ್ತುವರಿ ಮಾಡಿದ್ದೇವೆ ಎಂದರೆ ಸರಿಯಲ್ಲ. ವಾದಿಯು ಸರ್ವೇ ನಂ.1/3 ರಲ್ಲಿ 4 ಎಕರೆ 36 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ನಮ್ಮಿಂದ ಯಾವುದೇ ತಕರಾರು ಇರುವುದಿಲ್ಲ. ವಾದಿಗೆ ಸೇರಿದ 6 ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.